ವ್ಯವಹಾರಿಕ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂಡಾಧಿಕಾರಿಯವರ ನ್ಯಾಯಾಲಯ, ಸುಳ್ಯ, ದ.ಕ. ಇವರ ನ್ಯಾಯಾಲಯದಲ್ಲಿ –

ಸಿ.ಸಿ.ನಂ. 276/2022
ಸಿ.ಡಬ್ಲ್ಯೂ–6
ಪಿ.ಡಬ್ಲೂ –5

ಸಾಕ್ಷಿದಾರರ ಹೆಸರು : ರಾಮು

ತಂದೆಯ ಹೆಸರು : ಕೆ.ಚೋಮ

ವಯಸ್ಸು : 62 ವರ್ಷ

ಉದ್ಯೋಗ : ನಿವೃತ್ತ ಪೋಸ್ಟ್‌ಮಾಸ್ಟರ್

ವಾಸ : ಗುತ್ತಿಗಾರು

ದಿನಾಂಕ : 19–08–2025.

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ನಾನು 2003 ರಿಂದ 2006 ರವರೆಗೆ ಸುಳ್ಯ ಅಂಚೆ ಉಪ ವಿಭಾಗದಲ್ಲಿ ಅಂಚೆ ಪರಿಶೀಲನಾಧಿಕಾರಿಯಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ದಿನಾಂಕ 29–01–2003, ದಿನಾಂಕ 27–02–2003 ರಂದು ಮರ್ಕಂಜ ಅಂಚೆ ಕಚೇರಿಗೆ ನಾನು ಭೇಟಿ ಮಾಡಿ, ಪರಿಶೀಲನೆಯನ್ನು ಮಾಡಿದ ಸಮಯ ಅಂಚೆ ಕಚೇರಿಯ ಲೆಡ್ಜರ್ ಪುಸ್ತಕಗಳಲ್ಲಿ ಯಾವುದೇ ದೋಷಗಳು ಮೇಲ್ನೋಟಕ್ಕೆ ಕಂಡು ಬಂದಿರುವುದಿಲ್ಲ. ನಂತರದ ದಿನಗಳಲ್ಲಿ ಅಚ್ಚುತ ಹಾಗೂ ವೀಣಾರವರು ತಾವು ಅಂಚೆ ಅಂಚೆ ಕಚೇರಿಯಲ್ಲಿ ನೀಡಿದ ಆರ್.ಡಿ.ಯನ್ನು ಅವಧಿಯ ಮುನ್ನ ಮುಕ್ತಾಯಗೊಳಿಸಲು ಕೇಳಿಕೊಂಡಿರುತ್ತಾರೆ. ನಾನು ಸದರಿ ಅಂಚೆ ಕಚೇರಿಯಲ್ಲಿ ಮರುಪರಿಶೀಲನೆ ಮಾಡಿದಾಗ, ಸದರಿ ಅಚ್ಚುತ ಹಾಗೂ ವೀಣಾರವರು ಪಾವತಿಸಿದ

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ಹಣದ ಕುರಿತು ಪಾಸ್ ಪುಸಕ ಹಾಗೂ ಲೆಡ್ಜರ್ ಪುಸ್ತಕದಲ್ಲಿ ವ್ಯತ್ಯಾಸಗಳು ಇರುವುದು ಕಂಡು ಬಂದಿರುತ್ತದೆ. ಅಚ್ಚುತ ಹಾಗೂ ವೀಣಾರವರ ಖಾತೆಯಿಂದ ನಮ್ಮ ಅಂಚೆ ಇಲಾಖೆಗೆ ಬರಬೇಕಾದ ಹಣವು ಪೋಸ್ಟ್ ಮಾಸ್ಟರ್ ಆದ ಆರೋಪಿಯಿಂದ ಪಾವತಿಯಾಗಿರುವುದಿಲ್ಲ. ನಂತರ ನಾವು ಮರ್ಕಂಜ ಗ್ರಾಮದ ಮನೆ-ಮನೆಗೆ ಹೋಗಿ ಅವರಿಂದ ಪಾಸ್ ಪುಸ್ತಕವನ್ನು ಪಡೆದು ನಮ್ಮ ಕಚೇರಿಗೆ ತಂದು ಪರಿಶೀಲನೆ ಮಾಡಿರುತ್ತೇವೆ. ಅಚ್ಚುತ, ವೀಣಾ, ಪಾಟಾಳಿಯವರ ಪಾಸ್ ಪುಸ್ತಕಗಳನ್ನು ನಾನು ಪರಿಶೀಲನೆ ಮಾಡಿದಾಗ, ಅವರ ಪಾಸ್ ಪುಸ್ತಕಗಳಲ್ಲಿದ್ದ ಮೊತ್ತ ಹಾಗೂ ನಮ್ಮ ಲೆಡ್ಜರ್ ಪುಸ್ತಕದಲ್ಲಿ ವ್ಯತ್ಯಾಸ ಇರುವುದು ಕಂಡು ಬಂದಿರುತ್ತದೆ.

ಒಂದು ಪಾಸ್ ಪುಸ್ತಕದಲ್ಲಿ ರೂ.7,000/-, ಮತ್ತೊಂದು ಪಾಸ್ ಪುಸ್ತಕದಲ್ಲಿ ರೂ.5,000/- ಹಾಗೂ ಇನ್ನೊಂದು ಪಾಸ್ ಪುಸ್ತಕದಲ್ಲಿ ರೂ.3,000/- ಹಣವು ನಮ್ಮ ಅಂಚೆ ಇಲಾಖೆಯ ಖಾತೆಗೆ ಜಮಾವಣೆಯಾಗಿರುವುದಿಲ್ಲ. ಈ ಕುರಿತು ನಾನು ನಮ್ಮ ಮೇಲಧಿಕಾರಿಯವರಿಗೆ ಮಾಹಿತಿಯನ್ನು ನೀಡಿರುತ್ತೇನೆ. ನಂತರ ನಮ್ಮ ಮೇಲಧಿಕಾರಿಯವರು ಈ ಕುರಿತು ಆರೋಪಿಯನ್ನು ವಿಚಾರಣೆ ಮಾಡಿ, ಆದಂತಹ ವ್ಯತ್ಯಾಸವನ್ನು ಗಮನಿಸಿ, ಆರೋಪಿಯ ವಿರುದ್ಧ ಕಾನೂನು ಕ್ರಮವನ್ನು ಕೈಗೊಂಡಿರುತ್ತಾರೆ. ನಾನು ಈ ಕುರಿತು ನಮ್ಮ ಮೇಲಧಿಕಾರಿಯವರಿಗೆ ಆರೋಪಿಯ ವಿರುದ್ಧ ದೂರನ್ನು ನೀಡಿರುತ್ತೇನೆ.

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

2004 ರ 23 ನೇ ತಾರೀಕಿನಂದು ನಾನು ನಿಪಿ-25 ರ ದಾಖಲೆಗೆ ನನ್ನ ಸಹಿಯನ್ನು ಮಾಡಿರುತ್ತೇನೆ. ಸದರಿ ದಾಖಲೆಯನ್ನು ನಾನು ಈಗ ನ್ಯಾಯಾಲಯದಲ್ಲಿ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-25 ಎಂದು ನಿಶಾನಿಕರಿಸಿದ್ದು, ಅದರಲ್ಲಿರುವ ನನ್ನ ಸಹಿಯನ್ನು ನಾನು ನೋಡಿ ಒಪ್ಪಿ ಗುರುತಿಸಿದ್ದು, ಅದನ್ನು ನಿಪಿ-25(ಸಿ) ಎಂದು ಗುರುತಿಸಲಾಯಿತು.

ಆರೋಪಿಯು ದುರುಪಯೋಗಪಡಿಸಿದ ಪಾಸ್ ಪುಸ್ತಕವನ್ನು ಅ.ಸಾ.4 ರವರು ಸುಳ್ಯ ಪೊಲೀಸ್ ಠಾಣೆಗೆ ಹಾಜರುಪಡಿಸುವ ಸಮಯ ನಾನು ಹಾಜರಿದ್ದು, ಆ ಸಮಯದಲ್ಲಿ ನಾನು, ಅ.ಸಾ.5, ಜಯರಾಮ ಭಟ್, ಜಯರಾಮ ಶೆಟ್ಟಿ ಹಾಜರಿದ್ದು, ಆ ಸಮಯದಲ್ಲಿ ಇನ್ನೊಬ್ಬರು ಹಾಜರಿದ್ದು, ಅವರ ಹೆಸರು ನನಗೆ ಈಗ ನೆನಪಿರುವುದಿಲ್ಲ. ಸದರಿ ಮಹಜರು ಕ್ರಮವನ್ನು ಬೆಳಗ್ಗೆ 9.00-9.45 ಗಂಟೆಯವರೆಗೆ ಪೊಲೀಸರು ಜರಗಿಸಿರುತ್ತಾರೆ. ನಿಪಿ-26 ರಿಂದ ನಿಪಿ-29 ರ ಪಾಸ್ ಪುಸ್ತಕಗಳನ್ನು ನಾನು ನೋಡಿ ಗುರುತಿಸುತ್ತೇನೆ.

ಈ ಪ್ರಕರಣದ ಕುರಿತು ಪೊಲೀಸರು ನನ್ನನ್ನು ವಿಚಾರಿಸಿರುತ್ತಾರೆ.

ನಾನು ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಯನ್ನು ನೋಡಿ ಗುರುತಿಸುತ್ತೇನೆ.

(ಈ ಹಂತದಲ್ಲಿ ಮಾನ್ಯ ಸ.ಸ.ಅ.ರವರು ಸ್ಥಿರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು ಅನುಮತಿ ನೀಡಲಾಯಿತು.)

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

<u>ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ</u>

ನಾನು ದಿನಾಂಕ 30-05-2003 ರಂದು ಮರ್ಕಂಜ ಅಂಚೆ ಕಚೇರಿಗೆ ಭೇಟಿ ನೀಡಿ, ಲೆಡ್ಜರ್ ಪುಸ್ತಕವನ್ನು ಪರಿಶೀಲನೆ ಮಾಡಿರುತ್ತೇನೆಂದರೆ ಸರಿ. ಪ್ರವೀಣ ಕುಮಾರಿ ರವರ ಆರ್.ಡಿ. ಖಾತೆಯು ಅವಧಿ ಮುಕ್ತಾಯವಾಗಿದ್ದು, ಅವರ ಖಾತೆಗೆ ಪ್ರತೀ ತಿಂಗಳು ಹಣ ಜಮೆಯಾಗದೇ ಇದ್ದು, ಸದರಿ ವಿಚಾರವು ನನ್ನ ಪರಿಶೀಲನೆಯಲ್ಲಿ ತಿಳಿದು ಬಂದಿರುತ್ತದೆಂದರೆ ಸರಿ.

ವಾಸುದೇವ ಗೌಡರ ಆರ್.ಡಿ. ಖಾತೆಯಲ್ಲಿ ರೂ.1,200/- ಜಮೆಯಾಗದೇ ಇದ್ದು, ಸದರಿ ಹಣವನ್ನು ಇಲಾಖಾ ದಾಖಲೆಯಲ್ಲಿ ಬರೆಯದೇ ಅವರ ಪಾಸ್ ಪುಸ್ತಕದಲ್ಲಿ ಮಾತ್ರ ನಮೂದಿಸಿ, ಅವ್ಯವಹಾರ ನಡೆದಿದೆ ಎಂದು ನನ್ನ ಪರಿಶೀಲನೆಯಲ್ಲಿ ಕಂಡು ಬಂದಿರುತ್ತದೆ ಎಂದರೆ ಸರಿ.

ಚಾ.ಸಾ.3 ಶಶಿಧರ ಎಂಬವರ ಖಾತೆಯಲ್ಲಿಯೂ ಸಹ ರೂ.7,900/- ಹಣವನ್ನು ಅವರ ಖಾತೆಗೆ ಜಮೆಯಾಗದೇ ಅವರ ಪಾಸ್ ಪುಸ್ತಕದಲ್ಲಿ ಮಾತ್ರ ನಮೂದಿಸಿ, ಅವ್ಯವಹಾರ ನಡೆದಿದೆ ಎಂದು ನನ್ನ ಪರಿಶೀಲನೆಯಲ್ಲಿ ಕಂಡು ಬಂದಿರುತ್ತದೆ ಎಂದರೆ ಸರಿ.

ಚಾ.ಸಾ.4 ದುಗ್ಗಪ್ಪ ಗೌಡರ ಆರ್.ಡಿ. ಖಾತೆಗೆ ಪ್ರತೀ ತಿಂಗಳು ರೂ.500/- ಪಾವತಿಸುವಂತೆ ಖಾತೆ ಇದ್ದು, ಸದರಿ ಖಾತೆಯಲ್ಲಿ ಪಾಸ್ ಪುಸ್ತಕದಲ್ಲಿ ಬರೆದ ಲೆಕ್ಕಕ್ಕಿಂತ ರೂ.5,000/- ಇಲಾಖಾ ಲೆಕ್ಕಕ್ಕೆ ಕಡಿಮೆ ಮಾಡಿರುವುದು ನನ್ನ ಪರಿಶೀಲನೆಯಲ್ಲಿ

ಕಂಡು ಬಂದಿರುತ್ತದೆ ಎಂದರೆ ಸರಿ. ಈ ನಾಲ್ಕೂ ಜನರ ಪಾಸ್ ಪುಸ್ತಕಗಳನ್ನು ಅ.ಸಾ.4 ಜಯರಾಮ ಶೆಟ್ಟಿಯವರು ಮಹಜರು ಸಮಯ ಪೊಲೀಸರ ಮುಂದೆ ಹಾಜರುಪಡಿಸಿರುತ್ತಾರೆಂದರೆ ಸರಿ.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ.ಜೆ.ಎನ್. ವಕೀಲರಿಂದಃ

ಈ ನ್ಯಾಯಾಲಯದಲ್ಲಿರುವ ಸಿ.ಸಿ.ನಂಬ್ರ 49/2019 ರ ಪ್ರಕರಣದ ಬಗ್ಗೆ ನೆನಪಿದೆಯಾ ಎಂದರೆ ಸಾಕ್ಷಿಯು ನನಗೆ ಆ ಬಗ್ಗೆ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ವಿರುದ್ಧ ಒಂದು ಪ್ರಕರಣ ದಾಖಲಾಗಿ, ಸದರಿ ಪ್ರಕರಣದಲ್ಲಿ ನಾನು ಆರೋಪಿಯಾಗಿರುತ್ತೇನೆ ಎಂದು ನನಗೆ ನೆನಪಿರುತ್ತದೆ. ಸದರಿ ಪ್ರಕರಣವು ಕೆ.ಎಸ್.ಆರ್.ಟಿ.ಸಿ. ನೌಕರರು ನನ್ನ ವಿರುದ್ಧ ದಾಖಲಿಸಿದ ಪ್ರಕರಣ ಎಂದರೆ ಸರಿ.

ನನ್ನ ಪರಿಶೀಲನೆ ಅಧಿಕಾರದ ವ್ಯಾಪ್ತಿಯು ಸುಳ್ಯ ಸಬ್ ಡಿವಿಜನ್ ಆಗಿತ್ತು. ಸದರಿ ಸುಳ್ಯ ಸಬ್ ಡಿವಿಜನ್ ಗೆ 48 ಗ್ರಾಮಗಳು ಬರುತ್ತಿತ್ತು. ನಮ್ಮ ಅಂಚೆ ಇಲಾಖೆಯ ನಿಯಮದ ಪ್ರಕಾರ ನಾನು ಪ್ರತೀ 6 ತಿಂಗಳಿಗೊಮ್ಮೆ ಎಲ್ಲಾ ಗ್ರಾಮದ ಅಂಚೆ ಕಚೇರಿಗೆ ಹೋಗಿ, ಅಲ್ಲಿಯ ಎಲ್ಲಾ ಕಡತಗಳನ್ನು ಪರಿಶೀಲನೆ ಮಾಡಬೇಕಾಗಿತ್ತು. ನನ್ನ ಅವಧಿಯಲ್ಲಿ ನಾನು ದೊಡ್ಡತೋಟ ಹಾಗೂ ಮರ್ಕಂಜ ಅಂಚೆ ಕಚೇರಿಗೆ ಎಷ್ಟು ಸಲ ಭೇಟಿ ಮಾಡಿದ್ದೀರಿ ಎಂದರೆ ಸಾಕ್ಷಿಯು ನಾನು ಅಂಚೆ ಇಲಾಖೆಗೆ ನೇಮಕವಾದ ನಂತರ ಅಂದರೆ 2003 ರಲ್ಲಿ ಮರ್ಕಂಜ ಅಂಚೆ ಕಚೇರಿಗೆ ಭೇಟಿ ಮಾಡಿರುತ್ತೇನೆ. ದೊಡ್ಡತೋಟ ಅಂಚೆ ಕಚೇರಿಯು ನಮ್ಮ ಸುಪರ್ದಿಗೆ ಬರುವುದಿಲ್ಲ. ಮರ್ಕಂಜದ

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ಅಕೌಂಟ್ ಆಫೀಸು ದೊಡ್ಡತೋಟ ಅಂಚೆ ಕಚೇರಿಯಾಗಿತ್ತು. ಮರ್ಕಂಜ ಅಂಚೆ ಕಚೇರಿಯಲ್ಲಿ ಯಾವುದೇ ವ್ಯವಹಾರ ಆದರೂ, ಆ ಕುರಿತು ವರದಿಯನ್ನು ದೊಡ್ಡತೋಟ ಅಂಚೆ ಕಚೇರಿಗೆ ಸಲ್ಲಿಸಬೇಕಾಗಿತ್ತು ಎಂದರೆ ಸರಿ.

ಮರ್ಕಂಜ ಅಂಚೆ ಕಚೇರಿಯಲ್ಲಿ ಎಸ್.ಬಿ., ಆರ್.ಡಿ., ಗ್ರಾಮೀಣ ಅಂಚೆ ಜೀವ ವಿಮೆ ಖಾತೆಗಳು ಇದ್ದವು. ಮರ್ಕಂಜ ಅಂಚೆ ಕಚೇರಿಗೆ ಭೇಟಿ ನೀಡಿ ಪ್ರಥಮವಾಗಿ ದಿನಾಂಕ 23-03-2003 ರಂದು ನನ್ನ ಮೇಲಧಿಕಾರಿಯವರಿಗೆ ವರದಿಯನ್ನು ನೀಡಿರುತ್ತೇನೆ. ನನ್ನ ಪ್ರಥಮ ವರದಿಯಲ್ಲಿ " ಯಾವುದೇ ಕುಂದು ಕೊರತೆಗಳು ಇರುವುದಿಲ್ಲ " ಎಂದು ನಮೂದಿಸಿರುತ್ತೇನೆ ಎಂದರೆ ಸರಿ.

ನಾನು ನೇರವಾಗಿ ಪೊಲೀಸ್ ಇಲಾಖೆಗೆ ಯಾವುದೇ ವರದಿಯನ್ನು ನೀಡಿರುತ್ತೀರಾ ಎಂದರೆ ಸಾಕ್ಷಿಯು ನೇರವಾಗಿ ನಾವು ಪೊಲೀಸ್ ಇಲಾಖೆಗೆ ವರದಿಯನ್ನು ನೀಡಲಾಗುವುದಿಲ್ಲ ಎಂದು ನುಡಿಯುತ್ತಾರೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತಹ ಖಾತೆದಾರರು ನೇರವಾಗಿ ಪೊಲೀಸ್ ಇಲಾಖೆಗೆ ವರದಿಯನ್ನು ನೀಡಿದ್ದಾರಾ ಎಂದರೆ ಸಾಕ್ಷಿಯು ಇತರರು ನೀಡುವ ದೂರಿನ ಬಗ್ಗೆ ನಮಗೆ ತಿಳಿಯುವುದಿಲ್ಲ ಎಂದು ನುಡಿಯುತ್ತಾರೆ.

ದೊಡ್ಡತೋಟ ಅಂಚೆ ಕಚೇರಿಯಲ್ಲಿ ಅಕೌಂಟ್ ರಿಜಿಸ್ಟರ್ ಪುಸ್ತಕ ಇರುತ್ತದೆ ಎಂದರೆ ಸರಿ. ದಿನವಹಿ ವ್ಯವಹಾರದ ಹಣವನ್ನು ಮರ್ಕಂಜ ಅಂಚೆ ಕಚೇರಿಯಲ್ಲಿ ಇಟ್ಟುಕೊಳ್ಳಲು ಸಾಧ್ಯವಿಲ್ಲ ಎಂದರೆ ಸಾಕ್ಷಿಯು ಹಣವನ್ನು ಇಡಲು ಒಂದು ಮಿತಿ ಇದ್ದು,

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ಆ ಮಿತಿಯವರೆಗೆ ಮರ್ಕಂಜ ಅಂಚೆ ಕಚೇರಿಯಲ್ಲಿ ಹಣವನ್ನು ಇಡಬಹುದು ಎಂದು ನುಡಿಯುತ್ತಾರೆ. ಮರ್ಕಂಜ ಅಂಚೆ ಕಚೇರಿಗೆ ರೂ.20,000/- ಹಣವನ್ನು ಇಡುವ ಮಿತಿಯಿರುತ್ತದೆ. ದೊಡ್ಡತೋಟ ಅಂಚೆ ಕಚೇರಿಯಲ್ಲಿ ಎಷ್ಟು ಹಣವನ್ನು ಇಡಲು ಮಿತಿ ಇತ್ತು ಎಂದರೆ ಸಾಕ್ಷಿಯು ದೊಡ್ಡತೋಟ ಅಂಚೆ ಕಚೇರಿಯು ನಮ್ಮ ವ್ಯಾಪ್ತಿಯಲ್ಲಿ ಬರುವುದಿಲ್ಲ ಎಂದು ನುಡಿಯುತ್ತಾರೆ.

ನಾನು ಮರ್ಕಂಜ ಅಂಚೆ ಕಚೇರಿಗೆ ಪ್ರತೀ ಸಾರಿ ಪರಿಶೀಲನೆಗೆ ಹೋಗುವಾಗ ಆರೋಪಿಯು ಪೋಸ್ಟ್ ಮಾಸ್ಟರ್ ಆಗಿ ಕರ್ತವ್ಯದಲ್ಲಿದ್ದರು. ಸಾಮಾನ್ಯವಾಗಿ ಪಾಸ್ ಪುಸ್ತಕಗಳು ಖಾತೆದಾರರಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಕೆಲವು ಖಾತೆದಾರರು ಅಂಚೆ ಕಚೇರಿಯಲ್ಲಿ ಪಾಸ್ ಪುಸ್ತಕವನ್ನು ಕೊಟ್ಟು ಹೋಗುತ್ತಾರೆ ಎಂದು ನುಡಿಯುತ್ತಾರೆ.

ಈ ಪ್ರಕರಣದಲ್ಲಿ ಖಾತೆದಾರರು ಪಾಸ್ ಪುಸ್ತಕವನ್ನು ಮರ್ಕಂಜ ಅಂಚೆ ಕಚೇರಿಯಲ್ಲಿ ಬಿಟ್ಟುಹೋಗಿರುತ್ತಾರಾ ಎಂದರೆ ಸಾಕ್ಷಿಯು 4-5 ಪಾಸ್ ಪುಸ್ತಕಗಳನ್ನು ಅದರ ಖಾತೆದಾರರು ಮರ್ಕಂಜ ಅಂಚೆ ಕಚೇರಿಯಲ್ಲಿ ಬಿಟ್ಟುಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಪಾಸ್ ಪುಸ್ತಕಗಳು ಯಾರಿಗೆ ಸಂಬಂಧಿಸಿದ್ದು ಎಂದು ನನಗೆ ಈಗ ತಿಳಿದಿರುವುದಿಲ್ಲ.

ಪಾಸ್ ಪುಸ್ತಕಗಳು ಖಾತೆದಾರರ ಬಳಿ ಇರುವುದರಿಂದ ಪಾಸ್ ಪುಸ್ತಕಗಳಲ್ಲಿ ಬರವಣಿಗೆಗಳನ್ನು ಅವರವರೇ ಮಾಡಿಕೊಳ್ಳಬಹುದು ಎಂದರೆ ಸಾಕ್ಷಿಯು ಹಾಗೆ ಮಾಡಲು ಸಾಧ್ಯ ಇಲ್ಲ ಹಾಗೂ ಅವಕಾಶ ಇರುವುದಿಲ್ಲ ಎಂದು ನುಡಿಯುತ್ತಾರೆ.

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ಖಾತೆದಾರರು ಪಾಸ್ ಪುಸ್ತಕವನ್ನು ಅಂಚೆ ಕಚೇರಿಯಲ್ಲಿ ಬಿಟ್ಟುಹೋದ ಸಮಯದಲ್ಲಿ ಇಲಾಖಾಧಿಕಾರಿಯವರು ಸದರಿ ಪಾಸ್ ಪುಸ್ತಕದಲ್ಲಿ ಬರೆಯಬಹುದು ಎಂದರೆ ಸಾಕ್ಷಿಯು ಸಂಬಂಧಪಟ್ಟ ಅಂಚೆ ಕಚೇರಿಯ ಪೋಸ್ಟ್ ಮಾಸ್ಟರ್ ಮಾತ್ರ ಪಾಸ್ ಪುಸ್ತಕದಲ್ಲಿ ಬರೆಯಲು ಅವಕಾಶ ಇದ್ದು, ಬೇರಾರಿಗೂ ಪಾಸ್ ಪುಸ್ತಕದಲ್ಲಿ ಬರೆಯಲು ಅವಕಾಶ ಇರುವುದಿಲ್ಲ ಎಂದು ನುಡಿಯುತ್ತಾರೆ.

ಚಾ.ಸಾ.1 ರವರು ನಮ್ಮ ಮೇಲಧಿಕಾರಿಯಾಗಿರುತ್ತಾರೆ. ಚಾ.ಸಾ.1 ರವರು ನೀಡಿದ ನಿರ್ದೇಶನವನ್ನು ಹಾಗೂ ಆದೇಶವನ್ನು ನಾನು ಪಾಲನೆ ಮಾಡಬೇಕಾಗುತ್ತದೆ ಎಂದರೆ ಸರಿ.

ಮರ್ಕಂಜ ಅಂಚೆ ಕಚೇರಿಯಲ್ಲಿ ಇಬ್ಬರು ಸಿಬ್ಬಂದಿಗಳು ಇದ್ದರು. ಒಬ್ಬರು ಪೋಸ್ಟ್ ಮಾಸ್ಟರ್ ಹಾಗೂ ಇನೊಬ್ಬರು ಪೋಸ್ಟ್ ಮ್ಯಾನ್ ಆಗಿದ್ದರು. ನಮ್ಮ ಸುಪರ್ದಿಗಳಿಗೆ ಒಳಪಟ್ಟ ಪ್ರತೀ ಅಂಚೆ ಕಚೇರಿಗಳನ್ನು ಪರಿಶೀಲನೆ ಮಾಡಲು ನನಗೆ ಹಾಗೂ ನನ್ನ ಮೇಲಧಿಕಾರಿಯವರಿಗೆ ಅಧಿಕಾರ ಇರುತ್ತದೆ. ನನ್ನ ಅಧೀನದಲ್ಲಿರುವ ಸಿಬ್ಬಂದಿಗಳಿಗೆ ಅಂಚೆ ಕಚೇರಿಗಳನ್ನು ಪರಿಶೀಲನೆ ಮಾಡಲು ಅಧಿಕಾರ ಇರುವುದಿಲ್ಲ ಎಂದರೆ ಸರಿ.

ನಾನು ಹಾಗೂ ಅಚ್ಚುತರವರು ಆತ್ಮೀಯರು ಎಂದರೆ ಸರಿ. ಅಚ್ಚುತರವರಿಗೆ ಸಂಬಂಧಿಸಿದ ಖಾತೆಯನ್ನು ನಾನು ನಿರ್ವಹಿಸುತ್ತಿದ್ದೆ ಎಂದರೆ ಸರಿಯಲ್ಲ. ಸಾಕ್ಷಿ

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ಮುಂದುವರೆದು ನನ್ನ ಊರು ಹಾಗೂ ಅವರ ಊರು ಬೇರೆ-ಬೇರೆಯಾಗಿರುತ್ತದೆ ಎಂದು ನುಡಿಯುತ್ತಾರೆ.

ಚಾ.ಸಾ.3 ರವರ ಪಾಸ್ ಪುಸ್ತಕಕ್ಕೆ ಸಂಬಂಧಿಸಿದಂತೆ ಅವರ ಪಾಸ್ ಪುಸ್ತಕವನ್ನು ಹಾಗೂ ಇಲಾಖಾ ಲೆಡ್ಜರ್ ಪುಸ್ತಕವನ್ನು ನಾನು ತಾಳೆ ನೋಡಿರುತ್ತೇನೆ. ಸದರಿ ಪಾಸ್ ಪುಸ್ತಕ ಹಾಗೂ ಲೆಡ್ಜರ್ ಪುಸ್ತಕ ತಾಳೆ ನೋಡಿದಾಗ, ನಮ್ಮ ಇಲಾಖೆಗೆ ಪಾವತಿಸಬೇಕಾದ ರೂ.5,000/- ಕಡಿಮೆಯಾಗಿರುವುದು ಕಂಡು ಬಂದಿರುತ್ತದೆ. ಸದರಿ ವ್ಯತ್ಯಾಸವನ್ನು ನನ್ನನ್ನು ಹೊರತುಪಡಿಸಿ ಚಾ.ಸಾ.1 ರವರು ನೋಡಿರುತ್ತಾರೆ. ಚಾ.ಸಾ.3 ರವರಲ್ಲಿ ಪಾಸ್ ಪುಸ್ತಕವನ್ನು ತರಲು ಯಾರು ಹೇಳಿದರು ಎಂದರೆ ಸಾಕ್ಷಿಯು ನಾವು ಪ್ರತೀ ಮನೆ-ಮನೆಗೆ ಹೋಗಿ ಪಾಸ್ ಪುಸ್ತಕವನ್ನು ಪಡೆದುಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಪ್ರತೀ ಮನೆ-ಮನೆಗೆ ಹೋಗಲು ನನ್ನ ಮೇಲಧಿಕಾರಿಯವರು ನನಗೆ ಅಧಿಕಾರವನ್ನು ನೀಡಿರುತ್ತಾರೆ. ಪ್ರತೀ ಮನೆ-ಮನೆಗೆ ಹೋಗಲು ನನ್ನ ಮೇಲಧಿಕಾರಿಯವರು ನನಗೆ ಆದೇಶವನ್ನು ನೀಡಿರುತ್ತಾರೆ. ಸದರಿ ಲಿಖಿತ ಆದೇಶದ ದಾಖಲೆಯನ್ನು ನನ್ನ ಮೇಲಧಿಕಾರಿಯವರಿಗೆ, ಪೋಲೀಸರಿಗೆ ಹಾಗೂ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

ಆರೋಪಿಯ ತಂದೆಯು ಮರ್ಕಂಜ ಅಂಚೆ ಕಚೇರಿಯಲ್ಲಿ ಪೋಸ್ಟ್ ಮಾಸ್ಟರ್ ಆಗಿ ಕರ್ತವ್ಯ ನಿರ್ವಹಿಸಿದ್ದ ಬಗ್ಗೆ ನನಗೆ ತಿಳಿದಿರುತ್ತದೆ. ಆರೋಪಿಯ ತಂದೆಯ ನಂತರ ಆರೋಪಿಯು ಸದರಿ ಅಂಚೆ ಕಚೇರಿಗೆ ನೇಮಕಗೊಂಡಿರುತ್ತಾರೆ ಎಂದರೆ ಸರಿ.

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ಆರೋಪಿಗೂ ಚಾ.ಸಾ.1 ರವರಿಗೂ ಇಲಾಖಾ ವಿಷಯದಲ್ಲಿ ಸರಿ ಇರಲಿಲ್ಲ ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ.

ನಾನು ಮನೆ-ಮನೆಗೆ ಪಾಸ್ ಪುಸ್ತಕವನ್ನು ಸಂಗ್ರಹಿಸಲು ನಾನೊಬ್ಬನೇ ಹೋಗಿರುತ್ತೇನೆ. ದಿನಾಂಕ 27-01-2003 ರಿಂದ 15 ದಿನಗಳ ಕಾಲ ನಾನು 300 ಖಾತೆದಾರರ ಮನೆಗೆ ಹೋಗಿರುತ್ತೇನೆ. ಸದರಿ ಖಾತೆದಾರರನ್ನು ನಾನು ಸಂರ್ಪಕಿಸಿರುತ್ತೇನೆ. ನಮ್ಮ ಅಧೀನದಲ್ಲಿರುವ ಬೇರೆ ವ್ಯಾಪ್ತಿಯ ಮನೆಗಳಿಗೆ ನಾನು ಹೋಗಿರುತ್ತೇನೆ. ನಾನು ದಿನಂಪ್ರತಿ ಸುಳ್ಯದಿಂದ ಮರ್ಕಂಜ ಅಂಚೆ ಕಚೇರಿಯ ಸುತ್ತ-ಮುತ್ತಲಿನ ಖಾತೆದಾರರ ಬಳಿ ಹೋಗಿರುತ್ತೇನೆ. ನಾನು ಮರ್ಕಂಜಕ್ಕೆ ಹೋಗುವಾಗ ಸುಳ್ಯ ಮಾರ್ಗವಾಗಿ ಹೋಗುತ್ತಿದ್ದೆ. ಸುಳ್ಯದಿಂದ ಬೆಳಗ್ಗೆ 8.00 ಗಂಟೆಗೆ ಹೋಗಿ ಸಂಜೆ 5.00 ಕ್ಕೆ ವಾಪಾಸ್ಸಾಗುತ್ತಿದ್ದೆ. ಒಂದು ದಿನಕ್ಕೆ 10 ಮನೆಗಳಿಗೆ ಹೋಗುತ್ತಿದ್ದೆ. ಪ್ರತಿಯೊಂದು ಖಾತೆದಾರರ ಹೇಳಿಕೆಯನ್ನು ನಾನು ಪಡೆದುಕೊಳ್ಳುತ್ತಿದ್ದೆ.

ಈ ಪ್ರಕರಣದ ಸಲುವಾಗಿ ನಾನು ಪೊಲೀಸ್ ಠಾಣೆಗೆ ಎರಡು ಬಾರಿ ಹೋಗಿರುತ್ತೇನೆ. ಚಾ.ಸಾ.1 ರವರು ಹೇಳಿದ ಮೇರೆಗೆ ನಾನು ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ನಾನು ಪೊಲೀಸ್ ಠಾಣೆಗೆ ಹೋದ ಸಮಯದಂದು ಒಂದು ಸಹಿಯನ್ನು ಠಾಣೆಯಲ್ಲಿ ಹೋಗಿರುತ್ತೇನೆ. ನಾನು, ಅ.ಸಾ.4, ಜಯರಾಮ ಭಟ್, ಜಯರಾಮ ಶೆಟ್ಟಿ ಹಾಗೂ ಇನ್ನೊಬ್ಬರು ನಮ್ಮ ಜೊತೆ ಪೊಲೀಸ್ ಠಾಣೆಗೆ ಬಂದಿರುತ್ತಾರೆ. ನಾವು ಪೊಲೀಸ್ ಠಾಣೆಗೆ ಹೋದ ಸಮಯದಲ್ಲಿ ಮಹಜರಿಗೆ ನನ್ನ

ಸಾಕ್ಷಿಯ ಸಹಿ   ನ್ಯಾಯಾಧೀಶರ ಸಹಿ

ಸಹಿಯನ್ನು ನಾನು ಮಾಡಿರುತ್ತೇನೆ. ಸದರಿ ದಾಖಲೆಯನ್ನು ಪೊಲೀಸರು ಬರೆದಿರುತ್ತಾರೆ. ನಿಖರವಾಗಿ ಯಾವ ಪೊಲೀಸರು ಮಹಜರನ್ನು ಬರೆದಿರುತ್ತಾರೆಂದು ಪೊಲೀಸರ ಹೆಸರು ನನಗೆ ತಿಳಿದಿರುವುದಿಲ್ಲ. ನಾನು ಹಾಗೂ ಅ.ಸಾ. ಜಯರಾಮ ಶೆಟ್ಟಿ ಹೇಳಿದ ಪ್ರಕಾರ ಪೊಲೀಸರು ಮಹಜರು ದಾಖಲೆಯನ್ನು ಬರೆದಿರುತ್ತಾರೆ. ಚಾ.ಸಾ.1 ರವರು ನಮ್ಮ ಮೇಲಧಿಕಾರಿಯಾಗಿದ್ದು ಅವರು ಹೇಳಿದನ್ವಯ ನಾವು ಹೇಳಿಕೆಯನ್ನು ನೀಡಿರುತ್ತೇವೆ.

ನಿಪಿ-26 ರಿಂದ ನಿಪಿ-29 ರ ಪಾಸ್ ಪುಸ್ತಕಗಳನ್ನು ನನ್ನ ಸಮಕ್ಷಮ ಪೊಲೀಸರು ಸ್ವಾಧೀನಪಡಿಸಿಕೊಂಡ ಕುರಿತು ಪೊಲೀಸರು ಸದರಿ ದಾಖಲೆಗಳ ಬಗ್ಗೆ ನಿಶಾನೆಗಳನ್ನು ಮಾಡಿರುವುದಿಲ್ಲ. ನಿಪಿ-30 ರ ದಾಖಲೆಯನ್ನು ಯಾರು ಬರೆದಿರುತ್ತಾರೆಂದು ನನಗೆ ತಿಳಿದಿರುವುದಿಲ್ಲ.

ಪಾಸ್ ಪುಸ್ತಕಗಳನ್ನು ಪೊಲೀಸ್ ಠಾಣೆಗೆ ತೆಗೆದುಕೊಂಡು ಹೋಗುವ ಸಮಯದಲ್ಲಿ ನನ್ನ ಜೊತೆ ಸದರಿ ಪಾಸ್ ಪುಸ್ತಕಗಳ ಖಾತೆದಾರರು ಬಂದಿರುವುದಿಲ್ಲ. ಪಾಸ್ ಪುಸ್ತಕಗಳನ್ನು ಖಾತೆದಾರರು ನನಗೆ ನೇರವಾಗಿ ತಂದುಕೊಟ್ಟಿರುತ್ತಾರೆ. ಖಾತೆದಾರರು ಪಾಸ್ ಪುಸ್ತಕಗಳನ್ನು ನನಗೆ ತಂದುಕೊಟ್ಟ ದಿನದಿಂದ ಒಂದು ವಾರದ ತನಕ ಅವುಗಳು ನನ್ನ ಬಳಿ ಇತ್ತು.

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

2003 ರ ಸಮಯದಲ್ಲಿ ಹೆಚ್ಚಿನ ಖಾತೆದಾರರಿಗೆ ಓದು-ಬರಹದ ಜ್ಞಾನ ಕಡಿಮೆ ಇತ್ತು ಎಂದರೆ ಸರಿ. ಆಗಿನ ಕಾಲದಲ್ಲಿ ಅಂಚೆ ಕಚೇರಿ ಹಾಗೂ ಬ್ಯಾಂಕ್‌ಗಳಲ್ಲಿ ವ್ಯವಹರಿಸಬೇಕಾದರೆ ಇನ್ನೊಬ್ಬರನ್ನು ಅವಲಂಭಿಸುತ್ತಾರೆ ಎಂದರೆ ಸರಿ.

ನಾನು ಹೇಳಿದಂತೆ ಆರೋಪಿಯಿಂದ ಯಾವುದೇ ಹಣದ ದುರುಪಯೋಗವಾಗಿದ್ದು ಇಲ್ಲ , ಆರೋಪಿಯಿಂದ ಯಾವುದೇ ತಪ್ಪು ನಡೆದದ್ದು ಇಲ್ಲ ಎಂದರೆ ಸರಿಯಲ್ಲ. ಆರೋಪಿಯಿಂದ ಏನಾದರೂ ತಪ್ಪು ಸಂಭವಿಸಿದ್ದೇ ಆದಲ್ಲಿ ನಾನು ಪ್ರಥಮವಾಗಿ ಆರೋಪಿಯ ವಿರುದ್ಧ ಮೇಲಧಿಕಾರಿಯವರಿಗೆ ದೂರನ್ನು ಸಲ್ಲಿಸುತ್ತಿದ್ದೆ ಎಂದರೆ ಸರಿಯಲ್ಲ. ನಾನು ಚಾ.ಸಾ.1 ರವರ ನಿರ್ದೇಶನದ ಮೇರೆಗೆ ಆರೋಪಿಯನ್ನು ಮರ್ಕಂಜ ಅಂಚೆ ಕಚೇರಿಯಿಂದ ತೆಗೆದುಹಾಕುವ ಹುನ್ನಾರದಲ್ಲಿ ಚಾ.ಸಾ.1 ರವರು ದಾಖಲಿಸಿದ ಸುಳ್ಳು ಪ್ರಕರಣಕ್ಕೆ ನಾನು ಆರೋಪಿಯ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಕಟ್ಟು ಕತೆಯನ್ನು ಕಟ್ಟದೇ ಇದ್ದಲ್ಲಿ ಆರೋಪಿಯು ಮರ್ಕಂಜ ಅಂಚೆ ಕಚೇರಿಯಲ್ಲಿ ಖಾಯಂ ಹುದ್ದೆಯನ್ನು ಹೊಂದುತ್ತಿದ್ದರು ಎಂದರೆ ಸಾಕ್ಷಿಯು ಹಾಗೆ ಆಗಲು ಸಾಧ್ಯವಿಲ್ಲ, ಏಕೆಂದರೆ ಮೆರಿಟ್ ಮೇಲೆ ಭಡ್ತಿಯನ್ನು ಹೊಂದಬೇಕಾಗಿತ್ತು ಎಂದು ನುಡಿಯುತ್ತಾರೆ.

ನನ್ನ ಕರ್ತವ್ಯದ ಅವಧಿಯಲ್ಲಿ ಆರೋಪಿಯು ಮರ್ಕಂಜ ಅಂಚೆ ಕಚೇರಿಯಲ್ಲಿ ಪೋಸ್ಟ್ ಮಾಸ್ಟರ್ ಆಗಿ ಕೆಲಸವನ್ನು ನಿರ್ವಹಿಸುತ್ತಿದ್ದರು ಎಂದರೆ ಸರಿ. ಒಂದು ವೇಳೆ

ಆರೋಪಿಯು ಅವ್ಯವಹಾರವನ್ನು ಮಾಡಿದಲ್ಲಿ ನಾನು ಕೂಡಾ ಸದರಿ ಅವ್ಯವಹಾರದಲ್ಲಿ ಭಾಗಿಯಾಗಿ , ಈ ಪ್ರಕರಣಕ್ಕೆ ಹೊಣೆಗಾರನಾಗುತ್ತಿದ್ದೆ ಎಂದರೆ ಸರಿಯಲ್ಲ.

ಅಚ್ಚುತ ಹಾಗೂ ವೀಣಾರವರು ಮರ್ಕಂಜ ಅಂಚೆ ಕಚೇರಿಯಲ್ಲಿ ಯಾವುದೇ ಖಾತೆಯಲ್ಲಿ ಹಣವನ್ನು ಜಮೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಒಂದು ವೇಳೆ ಅಚ್ಚುತ ಹಾಗೂ ವೀಣಾರವರು ಹಣವನ್ನು ಜಮೆ ಮಾಡಿದ್ದೇ ಆದಲ್ಲಿ ಮರ್ಕಂಜ ಹಾಗೂ ದೊಡ್ಡತೋಟ ಅಂಚೆ ಕಚೇರಿಯಲ್ಲಿ ನಮೂದು ಇರುತ್ತಿತ್ತು ಎಂದರೆ ಸರಿಯಲ್ಲ. ನಿಪಿ-26 ರಿಂದ ನಿಪಿ-29 ರ ಪಾಸ್ ಪುಸ್ತಕಗಳಲ್ಲಿ ಇರುವ ಬರವಣಿಗೆಗಳು ಆರೋಪಿಯದ್ದು ಆಗಿರದೇ, ನನ್ನ ಹಾಗೂ ಚಾ.ಸಾ.1 ರವರದ್ದಾಗಿರುತ್ತದೆಂದರೆ ಸರಿಯಲ್ಲ.

ಪೊಲೀಸರು ಮರ್ಕಂಜ ಗ್ರಾಮ ಅಂಚೆ ಕಚೇರಿಗಾಗಲೀ, ಮುಖ್ಯ ಅಂಚೆ ಕಚೇರಿಗಾಗಲೀ ಬಂದದ್ದಿಲ್ಲ. ನಾನು ಹೇಳಿದಂತೆ ಯಾವುದೇ ಖಾತೆದಾರರು ಅವರು ಹೊಂದಿದ ಖಾತೆಗೆ ಹಣವನ್ನು ಜಮೆ ಮಾಡಿದ್ದು ಇಲ್ಲ ಎಂದರೆ ಸರಿಯಲ್ಲ. ನಾನು ಸದರಿ ಪಾಸ್ ಪುಸ್ತಕಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿದ ಪಾಸ್ ಪುಸ್ತಕಗಳು ಎಂದರೆ ಸರಿಯಲ್ಲ. ಖಾತೆದಾರರಿಗೆ ಹಂಚಬೇಕಾದ ಪ್ರಿಂಟೆಡ್ ಪಾಸ್ ಪುಸ್ತಕಗಳು ಆಯಾಯಾ ಅಂಚೆ ಕಚೇರಿಗಳಲ್ಲಿ ಇರುತ್ತದೆ ಎಂದರೆ ಸರಿ. ನನ್ನ ಹಾಗೂ ನನ್ನ ಮೇಲಧಿಕಾರಿಯವರ ಸುಪರ್ದಿಯಲ್ಲಿ ಪಾಸ್ ಪುಸ್ತಕಗಳು ಇರುತ್ತದೆ ಎಂದರೆ ಸರಿಯಲ್ಲ. ನಾವು ಖಾಲಿ ಪಾಸ್ ಪುಸ್ತಕಗಳನ್ನು ನಾವು ಆಯಾಯ ಅಂಚೆ ಕಚೇರಿಗಳಿಗೆ ಕಳುಹಿಸಿರುತ್ತೇವೆ ಎಂದರೆ ಸರಿ.

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ನಾವು ಮುಖ್ಯ ಅಂಚೆ ಕಚೇರಿಯಲ್ಲಿ ಖಾಲಿ ಪಾಸ್ ಪುಸ್ತಕಗಳನ್ನು ಇಟ್ಟಿದ್ದು, ನಂತರ ಆಯಾಯ ಅಂಚೆ ಕಚೇರಿಗಳಿಗೆ ಅವುಗಳನ್ನು ರವಾನಿಸುತ್ತೇವೆ.

ನಾನು ಹೇಳಿದಂತೆ ನಾನು ಯಾವುದೇ ಠಾಣೆಗೆ ಹೋದದ್ದು ಇಲ್ಲ, ಮಹಜರು ಕ್ರಮವನ್ನು ಪೊಲೀಸರು ಜರಗಿಸಿದ್ದು ಇಲ್ಲ ಎಂದರೆ ಸರಿಯಲ್ಲ. ಪೊಲೀಸರು ತಯಾರಿಸಿದ ಸುಳ್ಳು ಪ್ರಕರಣಕ್ಕೆ ಪೂರಕವಾಗಿ ನಾನು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಹೇಳಿದ ಪ್ರಕಾರ ಆರೋಪಿಯಿಂದ ಯಾವುದಾದರೂ ಅವ್ಯವಹಾರಗಳು ನಡೆದಲ್ಲಿ ನಾನು, ಚಾ.ಸಾ.1 ಹಾಗೂ ದೊಡ್ಡತೋಟ ಅಂಚೆ ಕಚೇರಿಯ ಅಕೌಂಟ್ ಆಫೀಸರ್ ಸಂಪೂರ್ಣ ಹೊಣೆಗಾರರಾಗಿರುತ್ತೇವೆ ಎಂದರೆ ಸರಿಯಲ್ಲ. ನನಗೆ ಆರೋಪಿಯ ವಿರುದ್ಧ ದ್ವೇಷವಿತ್ತು ಎಂದರೆ ಸರಿಯಲ್ಲ. ಆರೋಪಿಯು ಹಾಗೂ ಆರೋಪಿಯ ತಂದೆಯು ಪಾರದರ್ಶಕತೆಯಿಂದ ಕೆಲಸವನ್ನು ಮಾಡುತ್ತಿದ್ದ ಕಾರಣ, ಆರೋಪಿಯನ್ನು ಅಂಚೆ ಕಚೇರಿಗೆ ನೇಮಕ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ, ನಮ್ಮ ಇಲಾಖೆಯ ದಾಖಲೆಗಳಿಗೂ, ಆರೋಪಿಗೂ ಯಾವುದೇ ಸಂಬಂಧವಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದ ವ್ಯವಹಾರದ ವಿಚಾರಗಳೆಲ್ಲವೂ ಈ ಕೇಸಿಗೆ ನೀಡಿದ ಹೇಳಿಕೆಯನ್ನು ಓದಿಕೊಂಡಿರುವ ಕಾರಣ, ಹಾಗೂ ನನಗೆ ಈ ಪ್ರಕರಣದ ಸಲುವಾಗಿ ಮಾನ್ಯ ಸ.ಸ.ಅ. ರವರು ಹೇಳಿಕೊಟ್ಟ ಪ್ರಕಾರ ನಾನು ಈಗ ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ಮರು ವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿರುತ್ತಾರೆ.

ಸಾಕ್ಷಿಯ ಸಹಿ

ವ್ಯವಹಾರಿಕ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾಯಿಕ ದಂಡಾಧಿಕಾರಿಯವರು, ಸುಳ್ಯ, ದ.ಕ.